International Journal of Kannada Research 2021; 7(1): 24-26

International Journal of Kannada Research
www.kannadajournal.com

ISSN: 2454–5813
IJKR 2021; 7(1): 24-26
© 2021 IJKR
www.kannadajournal.com
Received: 16-10-2020
Accepted: 14-12-2020

**ಡಾ.ಶ್ರೀಧರ ಎನ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಸರಕಾರಿ ಕಾಲೇಜು, ಕಾಸರಗೋಡು, ಅಂಚೆ ವಿದ್ಯಾನಗರ, ಕಾಸರಗೋಡು ಜಿಲ್ಲೆ, ಕೇರಳ ರಾಜ್ಯ

**Corresponding Author:**
**ಡಾ.ಶ್ರೀಧರ ಎನ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಸರಕಾರಿ ಕಾಲೇಜು, ಕಾಸರಗೋಡು, ಅಂಚೆ ವಿದ್ಯಾನಗರ, ಕಾಸರಗೋಡು ಜಿಲ್ಲೆ, ಕೇರಳ ರಾಜ್ಯ

# ವಚನ ಸಾಹಿತ್ಯ: ಬಹುಶಿಸ್ತೀಯ ಆಯಾಮಗಳು

**ಡಾ.ಶ್ರೀಧರ ಎನ್**

ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಭಕ್ತಿಗೆ ಪ್ರಮುಖ ಸ್ಥಾನವಿದೆ. ಹನ್ನೆರಡನೆಯ ಶತಮಾನವು ಕರ್ನಾಟಕದಲ್ಲಿ ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯ ದೃಷ್ಟಿಗಳಿಂದ ಕ್ರಾಂತಿಯ ಕಾಲವಾಗಿದೆ. ವೀರಶೈವ ಧರ್ಮವು ಕರ್ನಾಟಕವನ್ನು ಪ್ರವೇಶಿಸಿದಾಗ, ಈ ಧರ್ಮದ ಸಾರಸತ್ವಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ಶಿವಶರಣರು 'ವಚನ' ಎಂಬ ಸಾಹಿತ್ಯ ಪ್ರಕಾರವನ್ನು ಸೃಷ್ಟಿಸಿಕೊಂಡರು. ಕೇವಲ ಪಂಡಿತರ ಆಸ್ತಿಯಾಗಿದ್ದ ಕನ್ನಡ ಸಾಹಿತ್ಯವು ವೀರಶೈವ ಧರ್ಮದ ಪ್ರಭಾವದಿಂದ ಜನಸಾಮಾನ್ಯರ ಬಳಿಗೆ ಬಂತು. ಹೀಗೆ ಕರ್ನಾಟಕದ ಧಾರ್ಮಿಕ, ಸಾಮಾಜಿಕ ಕ್ರಾಂತಿಯೊಂದರ ಫಲವಾಗಿ ಹುಟ್ಟಿಕೊಂಡ ವಚನಗಳು ಕನ್ನಡ ಸಾಹಿತ್ಯಕ್ಕೆ ಕ್ರಾಂತಿಕಾರಿಯಾದ ಒಂದು ಹೊಸ ತಿರುವನ್ನು ನೀಡಿದ್ದು ಮಹತ್ವದ ಸಂಗತಿಯಾಗಿದೆ.

ವಚನ ಎಂದರೆ ಮಾತು ಎಂದರ್ಥ. ಮಾತು ಗದ್ಯದಲ್ಲಿ ವ್ಯಕ್ತವಾಗುವಂಥದ್ದು. ಹನ್ನೆರಡನೆಯ ಶತಮಾನದ ಶಿವಶರಣರು ತಮ್ಮ ಭಕ್ತಿ ಹಾಗೂ ಅನುಭವಗಳ ಅಭಿವ್ಯಕ್ತಿಯನ್ನು ವಚನ ಎಂದು ಕರೆದರು. ಮೇಲ್ನೋಟಕ್ಕೆ ಶಿವಶರಣರ ವಚನಗಳು ಗದ್ಯವೆಂದೇ ಕಂಡುಬಂದರೂ, ಅವುಗಳನ್ನು ಕೇವಲ ಗದ್ಯವೆಂದು ಕರೆಯಲಾಗದು. ಯಾಕೆಂದರೆ, ಹೆಚ್ಚಿನ ವಚನಗಳಲ್ಲಿ ಗದ್ಯದ ಏಕತಾನತೆಯನ್ನು ಮೀರಿದ ಗೇಯತೆಯನ್ನು ನಾವು ಕಾಣುತ್ತೇವೆ. ಶಿವಶರಣರ ವಚನಗಳೆಲ್ಲವೂ ಮುಕ್ತಕಗಳಾಗಿದ್ದು, ಗದ್ಯವೂ ಅಲ್ಲದ, ಪದ್ಯವೂ ಅಲ್ಲದ ವಿಶಿಷ್ಟವಾದ ರಚನೆಗಳಾಗಿವೆ. 'ತಾಳಮಾನ ಸರಿಸವನರಿಯೆ, ಓಜೆ ಬಜಾವಣೆಯ ಲೆಕ್ಕವನರಿಯೆ, ಅಮೃತಗಣ ದೇವಗಣವನರಿಯೆ, ಕೂಡಲಸಂಗಮದೇವ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂಬ ಬಸವಣ್ಣನವರ ವಚನದಿಂದ ವಚನಗಳನ್ನು ಹಾಡುವ ರೂಢಿ ಇತ್ತು ಎಂದು ತಿಳಿದು ಬರುತ್ತದೆ. ಭಕ್ತಿಯ ಭಾವವು ತೀವ್ರವಾದಾಗಲೆಲ್ಲ ಮಾತಿಗೆ ಗೇಯತೆಯ ಸ್ಪರ್ಶ ಒದಗುವುದು ಸಾಮಾನ್ಯ ಸಂಗತಿ. 'ವಚನಗಳೆಂದರೆ ನಡುಗನ್ನಡ ಶೈಲಿಯ ಅನುಭಾವ ಗದ್ಯದಲ್ಲಿ ಉಸುರಿದ ಅಧ್ಯಾತ್ಮ ಗೀತೆಗಳು' (ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ.ಮುಗಳಿ, ಪು.158.) ಎಂಬ ಮಾತನ್ನು ಈ ಹಿನ್ನೆಲೆಯಲ್ಲಿ ಪರಿಭಾವಿಸಿಕೊಳ್ಳಬೇಕು. ಆದುದರಿಂದಲೇ ವಚನ ಸಾಹಿತ್ಯವು ಭಾರತದ ಬೇರೆ ಯಾವ ಭಾಷೆಗಳಲ್ಲೂ ಇಲ್ಲದ ಕನ್ನಡದ ಆಸ್ತಿಯಾಗಿದೆ. ಹೀಗಾಗಿ ವಚನ ಸಾಹಿತ್ಯವನ್ನು ಬಹುಶಿಸ್ತೀಯ ಆಯಾಮಗಳಿಂದ ಅಧ್ಯಯನ ಮಾಡುವ ಅವಕಾಶಗಳಿವೆ.

**ಸಾಹಿತ್ಯ ಗುಣ**

ವಚನಕಾರರು ತಮ್ಮ ವಚನಗಳ ಮೂಲಕ ಭಾಷೆಗೆ ಹೊಸ ರೂಪವನ್ನು ನೀಡಿದರು. ಅನೇಕ ವಚನಗಳಲ್ಲಿ ಶಿವಶರಣರ ಕಾವ್ಯಭಾಷೆ ಸಮರ್ಥವಾಗಿ ಒಡಮೂಡಿದೆ.

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೊ
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೊ
ತನುವಿನಲ್ಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನದೊಳಗೆ ಮನದೊಡೆಯನಿದ್ದಾನೊ ಇಲ್ಲವೊ

**ಕೂಡಲಮಂಗಮದೇವಾ**

ಮನೆ ಮತ್ತು ಮನೆಯೊಡೆಯನನ್ನು ಪ್ರತೀಕವನ್ನಾಗಿ ಮಾಡಿರುವ ಈ ವಚನ ಪ್ರಶ್ನೋತ್ತರದ ಮೂಲಕ

ಅರ್ಥವನ್ನು ಅರಳಿಸಿಕೊಂಡು ಹೋಗುವ ರೀತಿ ಮನೋಜ್ಞವಾಗಿದೆ. ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ಎಂಬುದು ಒಂದು ಸಂದೇಹದ ಪ್ರಶ್ನೆ. ಆ ಪ್ರಶ್ನೆಗೆ ಒಂದು ಸುಳಿವನ್ನು ಕೊಡುವ ರೀತಿಯಲ್ಲಿ ಮುಂದಿನ ಸಾಲು. ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿರುವ ಕಾರಣ ಮನೆಯೊಳಗೆ ಮನೆಯೊಡೆಯನಿಲ್ಲ ಎಂಬುದು ಉತ್ತರ. ಅದೇ ರೀತಿ ತನುವಿನಲ್ಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿದರೆ ಮನದೊಳಗೆ ಮನದೊಡೆಯನಿಲ್ಲ ಎಂಬುದು ಸ್ಪಷ್ಟ. ಈ ರೀತಿಯಲ್ಲಿ ವಚನವು ತನ್ನ ಪರಿಣಾಮವನ್ನು ಪೂರ್ತಿಗೊಳಿಸುತ್ತದೆ.

ಸುಲಭಗ್ರಾಹ್ಯವಲ್ಲದ ಸಂಗತಿಗಳನ್ನು ದೃಷ್ಟಾಂತದ ನೆರವಿನಿಂದ ಪರಿಣಾಮಕಾರಿಯಾಗಿ ಮನವರಿಕೆ ಮಾಡಿಕೊಡುವ ವಚನ ಶಕ್ತಿಗೆ ಅಲ್ಲಮಪ್ರಭುವಿನ ಒಂದು ವಚನವನ್ನು ಉದಾಹರಣೆಯಾಗಿ ನೋಡಬಹುದು.

**ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ?**
ಬೆಟ್ಟದ ನೆಲ್ಲಿಕಾಯಿ ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧವಯ್ಯ?
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯ?

ಶರಣನಿಗೂ ದೇವರಿಗೂ ಇರುವ ಅಂತರ ಅಗಾಧವಾದರೂ ಭಕ್ತಿ ಅವರಿಬ್ಬರನ್ನೂ ಒಂದುಗೂಡಿಸುವ ಅದ್ಭುತವನ್ನು ಅಲ್ಲಮಪ್ರಭು ಸುಂದರವಾದ ದೃಷ್ಟಾಂತಗಳ ಮೂಲಕ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ವಚನ ಸಾಹಿತ್ಯದಲ್ಲಿ ಕಳಪೆ ಎಂಬುದಿಲ್ಲ. ಆದ್ಯರ ವಚನಗಳನ್ನು ಕುರಿತು 'ಹಾಲತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದಂತಹ ನೊರೆತೆರೆಗಳು' ಎಂದು ಬಸವಣ್ಣನವರು ಹೇಳಿದರೆ, 'ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು' ಎಂದು ಶಿವಶರಣರ ವಚನಗಳ ಮಹತ್ವವನ್ನು ಜೇಡರದಾಸಿಮಯ್ಯ ತಿಳಿಸಿದ್ದಾನೆ.

**ಅಧ್ಯಾತ್ಮ**

ಶಿವಶರಣರ ನಿರ್ದಿಷ್ಟ ಗುಣಸ್ವಭಾವಗಳನ್ನು ಅವರ ವಚನಗಳಿಂದ ಗುರುತಿಸಿಕೊಳ್ಳಲು ಸಾಧ್ಯ. ಬಸವಣ್ಣನವರು ಭಕ್ತಿ ಭಂಡಾರಿಗಳು. ಚೆನ್ನಬಸವಣ್ಣ ಮಹಾಜ್ಞಾನಿ. ಅಲ್ಲಮಪ್ರಭು ವೈರಾಗ್ಯಮೂರ್ತಿ. ಸಿದ್ಧರಾಮ ಕರ್ಮಯೋಗಿ. ಅಕ್ಕಮಹಾದೇವಿ ಸತಿಪತಿಭಾವದ ಕವಯಿತ್ರಿ. ದಾರಿ ಹಲವಾದರೂ ಶಿವಶರಣರ ಗುರಿ ಒಂದೇ. ಅದು ತಮ್ಮ ಇಷ್ಟದೈವ ಶಿವನ ಸಾಕ್ಷಾತ್ಕಾರ. ಪರಮಾತ್ಮ ಸ್ವರೂಪವನ್ನು ದರ್ಶಿಸುವುದಕ್ಕೆ ಶಿವಶರಣರು ವೀರಶೈವ ಧರ್ಮದ ಚೌಕಟ್ಟಿನಲ್ಲಿ ಬಗೆಬಗೆಯ ಸಾಧನೆಗಳನ್ನು ಮಾಡಿದರು. ಕಾಯಕ ನಿಷ್ಠೆಯನ್ನು ಮೆರೆದರು. ಭಕ್ತಿ ಜ್ಞಾನ ವೈರಾಗ್ಯಗಳನ್ನು ಬದುಕಿನಲ್ಲಿ ರೂಢಿಸಿದರು.

ಪರಮಾತ್ಮನ ಕುರಿತಾಗಿ ಜೇಡರ ದಾಸಿಮಯ್ಯನು 'ಮರದೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ' ಎಂದು ಹೇಳಿದರೆ, 'ಶಿಲೆಯೊಳಗಿನ ಪಾವಕನಂತೆ, ನೆಲದ ಮರೆಯ ನಿಧಾನದಂತೆ' ಶಿವನು ನಮ್ಮ ಸುತ್ತಲೂ ಅಂತಸ್ಥನಾಗಿದಾನೆ ಎಂದು ಅಲ್ಲಮ ಸಾರಿದ. 'ವಚನದಲಿ ನಾಮಾಮೃತ ತುಂಬಿ, ನಯನದಲಿ ನಿಮ್ಮ ಮೂರುತಿ ತುಂಬಿ, ಮನದಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿ ತುಂಬಿ ಕೂಡಲಸಂಗಮದೇವಾ, ನಿಮ್ಮ ಚರಣಕಮಲದೊಳಗಾನು ತುಂಬಿ' ಎಂಬುದು ಬಸವಣ್ಣನ ಆರ್ತಭಕ್ತಿಗೆ ಉದಾಹರಣೆ. 'ಅನುಭಾವವೆಂದರೆ ನೆಲದ ಮರೆಯ ನಿಧಾನ ಕಾಣಿರೋ' ಎಂದು ಚೆನ್ನಬಸವಣ್ಣ ಪ್ರತಿಪಾದಿಸಿದ. ಲಿಂಗಪತಿ ಶರಣಸತಿ ಎಂಬ ಭಾವವನ್ನು ಅಕ್ಕಮಹಾದೇವಿಯ ವಚನಗಳಲ್ಲಿ ಕಾಣಬಹುದು. ಅವಳ ಅನೇಕ ವಚನಗಳು ಸುಂದರವಾದ ಭಾವಗೀತೆಗಳಾಗಿವೆ. ಕನಸು ಮನಸಿನಲ್ಲಿಯೂ ಮಲ್ಲಿಕಾರ್ಜುನ ಶಿವನನ್ನು ಗಂಡನೆಂದು ಭಾವಿಸಿದ ಅವಳು 'ಆನು ಚೆನ್ನಮಲ್ಲಿಕಾರ್ಜುನಂಗೆ ಮದುವಳಿಗೆ' ಎಂದು ಹೇಳಿಕೊಳ್ಳುತ್ತಾಳೆ. ಅಕ್ಕನ ವಚನಗಳಲ್ಲಿ ಭಗವಂತನ ಸಾಕ್ಷಾತ್ಕಾರಕ್ಕಾಗಿ ಸಾಧಕನಲ್ಲಿ ಕಾಣುವ ಆಂತರಿಕ ಹೋರಾಟ ಮತ್ತು ರೋದನಗಳು ಸುಂದರವಾಗಿ ಅಭಿವ್ಯಕ್ತಗೊಂಡಿವೆ. ಹೀಗೆ ಶಿವಶರಣರ ಅಧ್ಯಾತ್ಮ ಸಾಧನೆಯ ವಿವಿಧ ಹಂತಗಳು ವಚನಗಳಲ್ಲಿ ಅನಾವರಣಗೊಂಡಿವೆ.

**ಸಾಮಾಜಿಕತೆ**

ವಚನ ಸಾಹಿತ್ಯದಲ್ಲಿ ಭಕ್ತಿಯಷ್ಟೆ ಪ್ರಧಾನವಾಗಿರುವುದು ಶಿವಶರಣರ ಸಾಮಾಜಿಕ ದೃಷ್ಟಿ. ಭಕ್ತಿಗೆ ಅತ್ಯುನ್ನತವಾದ ಸ್ಥಾನವನ್ನು ನೀಡಿದ ಶಿವಶರಣರು ಜಾತಿ ವರ್ಗ ಭೇದವಿಲ್ಲದೆ ಒಂದಾಗಿ ಶಿವತತ್ವವನ್ನು ಪ್ರಚಾರ ಮಾಡಿದರು. ಆದುದರಿಂದಲೇ ಬಸವಣ್ಣ,

> ಸೆಟ್ಟಿಯೆಂಬೆನೆ ಸಿರಿಯಾಳನ?
> ಮಡಿವಾಳನೆಂಬೆನೆ ಮಾಚಯ್ಯನ?
> ಡೋಹಾರನೆಂಬೆನೆ ಕಕ್ಕಯ್ಯನ?
> ಮಾದಾರನೆಂಬೆನೆ ಚೆನ್ನಯ್ಯನ?
> ಆನು ಹಾರುವನೆಂದರೆ ಕೂಡಲಸಂಗಮ ನಗುವನಯ್ಯಾ?

ಎಂದು ಹೇಳಿರುವುದು. ವಚನಕಾರರು ಮೇಲು ಕೀಳಿನ ಭೇದಭಾವವಿಲ್ಲದ ಪರಿಶುದ್ಧವಾದ ಸಮಾಜವನ್ನು ಕಟ್ಟಲು ಬಯಸಿದ್ದರು. ಅದಕ್ಕಾಗಿ ಅವರು ತಮ್ಮ ವಚನಗಳಲ್ಲಿ ಸಾಮಾನ್ಯ ಜನರಿಗೆ ನೀತಿಯ ಬೋಧನೆಯನ್ನು ಮಾಡಿದರು. ಧರ್ಮದ ತಿಳಿವನ್ನು ನೀಡಿದರು. ಸಮಾಜದ ಢಾಂಬಿಕತೆಯನ್ನು ವಿಡಂಬಿಸಿದರು. ಅನಾಚಾರಗಳನ್ನು ಖಂಡಿಸಿದರು. ಇಂತಹ ಸಾಮಾಜಿಕ ಪ್ರಜ್ಞೆಯೇ ವಚನ ಸಾಹಿತ್ಯದ ಅನನ್ಯತೆಯಾಗಿದೆ.

ವೀರಶೈವ ಧರ್ಮವು ಸರ್ವಸಮಾನತೆಯನ್ನು ಸಾರುವುದರಿಂದ ಎಲ್ಲ ಮತ ಜಾತಿ ಪಂಥದವರು ಆಕಡೆಗೆ ಆಕರ್ಷಿತರಾದರು. ಆ ಕಾಲದಲ್ಲಿ ಅಕ್ಷರಜ್ಞಾನವನ್ನು ಪಡೆಯಲು ಅವಕಾಶವಿಲ್ಲದಿದ್ದ ಸ್ತ್ರೀಯರೂ, ಕೆಳವರ್ಗದವರೂ ಶಿವಶರಣರಾದರು. ಶಿವದೀಕ್ಷೆಯನ್ನು ಪಡೆದು ಜ್ಞಾನಿಗಳಾದರು. ತಮ್ಮ ಅನುಭವಗಳನ್ನು ವಚನಗಳ ಮೂಲಕ ಅರುಹಿದರು.

ಕಾಯಕವೇ ಕೈಲಾಸ ಎಂಬುದು ವೀರಶೈವ ಧರ್ಮದ ಮುಖ್ಯ ಆಶಯವಾಗಿತ್ತು. ಇದನ್ನು ಮೊತ್ತಮೊದಲಿಗೆ ವಚನದಲ್ಲಿ ಅಭಿವ್ಯಕ್ತಗೊಳಿಸಿದವನು ಆಯ್ದಕ್ಕಿ ಮಾರಯ್ಯ. ಈತ ಕಲ್ಯಾಣದಲ್ಲಿ ನೆಲದ ಮೇಲೆ ಚೆಲ್ಲಿದ ಅಕ್ಕಿಯನ್ನು ಆಯ್ದು ಹೊಟ್ಟೆ ಹೊರೆದುಕೊಳ್ಳುವ ಕಾಯಕವನ್ನು ಮಾಡುತ್ತಿದ್ದನಂತೆ. 'ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು, ಲಿಂಗಪೂಜೆಯಾದರೂ ಮರೆಯಬೇಕು, ಜಂಗಮ ಮುಂದೆ ನಿಂದಿದ್ದರೂ ಹಂಗ ಹರಿಯಬೇಕು' ಎನ್ನುವ ಆತ ದಿನನಿತ್ಯದ ಬದುಕಿಗೆ ಅಗತ್ಯವಾಗಿ ಮಾಡಲೇಬೇಕಾದ ಕೆಲಸಕ್ಕಿಂತ ಮಿಗಿಲಾದ ಅಧ್ಯಾತ್ಮ ಇಲ್ಲ ಎಂಬ ನಿಲುವನ್ನು ವ್ಯಕ್ತಪಡಿಸುತ್ತಾನೆ.(ವಚನ ವಿಚಾರ, ಓ.ಎಲ್.ನಾಗಭೂಷಣಸ್ವಾಮಿ, ಪು.55) ಹೀಗಾಗಿ ಸಮಗಾರ, ಅಗಸ, ಬೆಸ್ತ, ಬೇಡ, ಕುಂಬಾರ, ಮಡಿವಾಳ ಹೀಗೆ ಬಗೆಬಗೆಯ ವೃತ್ತಿಗಳಲ್ಲಿ ತೊಡಗಿಸಿಕೊಂಡವರು ವೀರಶೈವಧರ್ಮವನ್ನು ಸ್ವೀಕರಿಸಿಕೊಂಡರು. ಮಾತ್ರವಲ್ಲ ವಚನಗಳ ರಚನೆಯಲ್ಲಿ ತೊಡಗಿದರು. ಇದರಿಂದಾಗಿ ಸಮಾಜದ ಎಲ್ಲ ವರ್ಗದ ಜನರ ಅನುಭವಗಳು ವಚನ ಸಾಹಿತ್ಯ ಮೂಲಕ ಹರಿದಾಡಿದುವು. ಇವುಗಳನ್ನು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಅವಕಾಶಗಳಿವೆ.

ಸಾಮಾಜಿಕ ವಿಡಂಬನೆ ವಚನಗಳಲ್ಲಿ ಕಂಡು ಬರುವ ಇನ್ನೊಂದು ಮುಖ್ಯ ಅಂಶವಾಗಿದೆ. ಶಿವಶರಣರು ತಮ್ಮ ಸುತ್ತಮುತ್ತಲಿನ ಅಜ್ಞಾನ ಅಂಧಕಾರಗಳನ್ನು ತೊಡೆದು ಹಾಕಲು ಕಟಿಬದ್ಧರಾಗಿದ್ದರು. 'ಕಲ್ಲನಾಗರ ಕಂಡರೆ ಹಾಲನೆರೆ ಎಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ, ಉಂಬ ಜಂಗಮ ಬಂದರೆ ನಡೆ ಎಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ, ಉಳ್ಳವರು ಶಿವಾಲಯವ ಮಾಡುವರು, ನಾನೇನ ಮಾಡಲಿ ಬಡವನಯ್ಯಾ' ಮೊದಲಾದ ವಚನಗಳಲ್ಲಿ ಬಸವಣ್ಣನವರು ಸಮಾಜದಲ್ಲಿ ನಡೆಯುತ್ತಿರುವ ಕಂದಾಚಾರಗಳನ್ನು ಕಟುವಾಗಿ ವಿಡಂಬಿಸುತ್ತಾರೆ. 'ಮಾನವೀಯತೆಯ ಹಿನ್ನೆಲೆಯಲ್ಲಿ ಸಾಮಾಜಿಕ ಕ್ರಾಂತಿಯನ್ನು ಸಾಧಿಸದಿದ್ದರೆ ಆರ್ಥಿಕ ರಾಜಕೀಯ ಕ್ರಾಂತಿಗಳು ಸಾಧ್ಯವಾಗಲಾರವೆಂಬುದು ದಾರ್ಶನಿಕರ ಮೂಲಭೂತ ನಿರ್ಣಯ. ಆಧುನಿಕ ಸಾಮಾಜಿಕ ಅಳತೆಗೋಲಿನಿಂದಲೂ ತೇರ್ಗಡೆಯಾಗಬಲ್ಲ ಸಿದ್ಧಾಂತಗಳನ್ನು ವಚನಕಾರರು ಕಾರ್ಯಗತಗೊಳಿಸುತ್ತಾರೆ (ಪೂರ್ವಕವಿಗಳಿಗೆ ನಮನ, ದೇಜಗೌ, ಪು.952) ಎಂಬ ಅಭಿಪ್ರಾಯವನ್ನು ಈ ಹಿನ್ನೆಲೆಯಲ್ಲಿ ನೋಡಬಹುದು.

**ವೈಚಾರಿಕತೆ**

ಧರ್ಮವು ಜನರಿಗೆ ಅಧ್ಯಾತ್ಮ, ಆಚಾರ, ನೀತಿಗಳನ್ನು ಬೋಧಿಸುತ್ತದೆ; ದುರಾಚಾರ ಮತ್ತು ದುಷ್ಟ ಚಿಂತನೆಗಳನ್ನು ದೂರ ಮಾಡುತ್ತದೆ. ಸಾಮಾಜಿಕ ಹಿತಚಿಂತನೆ ಯಾವುದೇ ಧರ್ಮದ ಮುಖ್ಯ ಉದ್ದೇಶ. ಪರಮಾತ್ಮನನ್ನು ಒಲಿಸಿಕೊಂಡು ಸಮಾಜಸೇವೆಯನ್ನು ಮಾಡುವುದು ವೀರಶೈವ ಧರ್ಮದ ಧ್ಯೇಯ. ಹೀಗಾಗಿ ಎಲ್ಲರೂ ಸದ್ವರ್ತನೆ, ಸದಾಚಾರಗಳಿಂದ ಬದುಕಬೇಕೆಂದು ವಚನ ಧರ್ಮವು ಸಾರುತ್ತದೆ. ಬಸವಣ್ಣನವರ 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ ಇದೇ ನಮ್ಮ ಕೂಡಲಸಂಗಮ ದೇವನನೊಲಿಸಿಕೊಳುವ ಪರಿ' ಎಂಬ ವಚನ ಭಾರತೀಯ ದರ್ಶನಗಳ ಸಾರದಂತಿದೆ. ಸದಾಚಾರವೇ ದೇವರನ್ನು ಒಲಿಸಿಕೊಳ್ಳುವುದಕ್ಕೆ ಇರುವ ದಾರಿ ಎನ್ನುವ ಬಸವಣ್ಣ ಮನುಷ್ಯ ಜನ್ಮ ಸಾರ್ಥಕವಾಗಬೇಕಾದರೆ ಸುತ್ತುಮುತ್ತಲಿನ ಹತ್ತು ಜನರಿಗೆ ಉಪಕಾರಿಯಾಗಿ ಬಾಳಬೇಕು ಎಂದು ಸಾರುತ್ತಾರೆ. 'ಮರ್ತ್ಯವೆಂಬುದು ಕರ್ತಾರನ ಕಮ್ಮಟ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು, ಮಾನವ ಜನ್ಮ ಅತ್ಯಂತ ಶ್ರೇಷ್ಠವಾದುದು, ದಯೆಯೇ ಧರ್ಮದ ಮೂಲವಯ್ಯ, ಆಚಾರವೇ ಸ್ವರ್ಗ, ಅನಾಚಾರವೇ ನರಕ' ಇವೇ ಮೊದಲಾದ ಸಾಲುಗಳನ್ನು ಗಮನಿಸಿಕೊಂಡಾಗ ವಚನ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡ ಸಾಮಾಜಿಕ ನೀತಿ, ವೈಚಾರಿಕತೆಗಳ ಆಳ ಹರಹು ಎಷ್ಟೆಂದು ತಿಳಿದು ಬರುತ್ತದೆ.

**ಸ್ತ್ರೀ ಸಮಾನತೆ**

ವೀರಶೈವ ಧರ್ಮದಲ್ಲಿ ಸ್ತ್ರೀಯರಿಗೂ ಪುರುಷರಂತೆಯೇ ಗೌರವದ ಸ್ಥಾನವಿದೆ. ಅನುಭವ ಮಂಟಪದಲ್ಲಿ ಪುರುಷರೊಂದಿಗೆ ಸ್ತ್ರೀಯರೂ ವಚನ ರಚನೆಯಲ್ಲಿ ತೊಡಗಿದರು. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಹೆಣ್ಣು, ಗಂಡು ಎಂಬ ಬೇಧವಿಲ್ಲ ಎಂಬುದನ್ನು ಆದ್ಯವಚನಕಾರ ಜೇಡರ ದಾಸಿಮಯ್ಯನೇ ಸಾರಿದ್ದಾನೆ. 'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥ' ಎಂಬ ಅವನ ಆಶಯವನ್ನು ಉಳಿದ ಶಿವಶರಣರೂ ಎತ್ತಿ ಹಿಡಿದಿದ್ದಾರೆ. ಅಕ್ಕಮಹಾದೇವಿ, ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ, ಕಾಳವ್ವೆ, ಅಮ್ಮುಗೆ ರಾಯಮ್ಮ, ಸೂಳೆ ಸಂಕವ್ವೆ ಮೊದಲಾದ ಅನೇಕ ವಚನಕಾರ್ತಿಯರು ವೀರಶೈವ ಧರ್ಮದ ಸಾಧಕರಾಗಿದ್ದರು. ಶಿವಾನುಭವ ಗೋಷ್ಠಿಗಳಲ್ಲಿ ಭಾಗವಹಿಸಿ ವಚನಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

**ಉಪಸಂಹಾರ**

ಹನ್ನೆರಡನೇ ಶತಮಾನವು ಕನ್ನಡ ಸಾಹಿತ್ಯದಲ್ಲಿ ಒಂದು ಪ್ರಮುಖವಾದ ಘಟ್ಟ. ಓದಿದರೆ ಗದ್ಯವಾಗುವ, ಹಾಡಿದರೆ ಹಾಡಾಗುವ ಕನ್ನಡದ ವಿಶಿಷ್ಟ ಕಾವ್ಯಪ್ರಕಾರ ವಚನವು ವೀರಶೈವ ಶರಣರ ಆಂದೋಲನ ಮತ್ತು ಅಭಿವ್ಯಕ್ತಿಗೆ ಸಾಧನವಾಯಿತು. ವಚನ ಸಾಹಿತ್ಯವು ಕನ್ನಡದಲ್ಲಿ ಪ್ರಭಾವಶಾಲಿ ಆತ್ಮವಿಮರ್ಶೆಯ ಮಾಧ್ಯಮವಾಗಿ ಬೆಳೆದು, ಮುಂದಿನ ಸಾಹಿತ್ಯ ಪರಂಪರೆಯ ಮೇಲೆ ಪ್ರಭಾವವನ್ನು ಬೀರಿತು. 'ಶಿವಶರಣರು ತಿಳಿಯಾದ ಕನ್ನಡದಲ್ಲಿ ಶಿವಾದ್ವೈತವನ್ನು ಬೋಧಿಸಿದರು. ಆದುದರಿಂದ ವಚನ ವಾಙ್ಮಯವನ್ನು ಕನ್ನಡದ ಶೈವಾಗಮಗಳು ಎಂದು ಕರೆದು ಗೌರವಿಸಲಾಗಿದೆ.'(ಕನ್ನಡ ಸಾಹಿತ್ಯ ಚರಿತ್ರೆ, ತ.ಸು.ಶಾಮರಾಯ, ಪು.54) ಎಂಬ ಮಾತನ್ನು ಇಲ್ಲಿ ಗಮನಿಸಿಕೊಳ್ಳಬಹುದು.

ಶಿವಶರಣರು ಸಾಹಿತ್ಯವಾಗಬೇಕೆಂದು ವಚನಗಳನ್ನು ಬರೆದವರಲ್ಲ. ಅಂದಿನ ಜನರ ಜೀವನದಲ್ಲಿ ಪರಿವರ್ತನೆಯನ್ನು ತರಬೇಕೆಂದು, ಧಾರ್ಮಿಕ ಗೊಡ್ಡು ಕಂದಾಚಾರಗಳು ತೊಲಗಿ ನಿಜವಾದ ಧರ್ಮವು ನೆಲೆಗೊಳ್ಳಬೇಕೆಂದು, ಸಾಮಾಜಿಕ ಸಮಾನತೆ, ಸ್ವಾತಂತ್ರ್ಯ ನೆಲೆಗೊಂಡು ಜನಜೀವನ ಹೊಸತಾಗಬೇಕೆಂದು ವಚನಗಳನ್ನು ಬರೆದರು. ಬದುಕಿನ ಅನುಭವದಿಂದ ಮಾಗಿದ ಅವರ ಮಾತಿಗೆ ಸಾಹಿತ್ಯದ ಶಕ್ತಿ ಬಂತು. ಹೀಗಾಗಿ ವಚನ ಸಾಹಿತ್ಯಕ್ಕೆ ವಿಶ್ವದ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟವಾದ ಮತ್ತು ಮಹತ್ವದ ಸ್ಥಾನವು ದಕ್ಕಿದೆ. ಈ ಹಿನ್ನೆಲೆಯಲ್ಲಿ ವಚನ ಸಾಹಿತ್ಯವನ್ನು ಬಹುಶಿಸ್ತೀಯ ನೆಲೆಗಳಲ್ಲಿ, ಭಿನ್ನ ಆಯಾಮಗಳಲ್ಲಿ ಅಧ್ಯಯನ ಮಾಡಬೇಕಾದುದು ಕಾಲದ ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


1. ಕನ್ನಡ ಸಾಹಿತ್ಯ ಚರಿತ್ರೆ, ಡಾ.ತ.ಸು.ಶಾಮರಾಯ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, 1997.
2. ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ.ಮುಗಳಿ, ಗೀತಾ ಬುಕ್ ಹೌಸ್, ಮೈಸೂರು, 2014.
3. ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳು, ಡಾ.ಎಂ.ಎಸ್.ಹಿರೇಮಠ, ವಿದ್ಯಾನಿಧಿ ಪ್ರಕಾಶನ ಗದಗ, 1993.
4. ಪೂರ್ವಕವಿಗಳಿಗೆ ನಮನ, ಪ್ರೊ.ದೇಜಗೌ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2006.
5. ಬಸವಣ್ಣನವರ ವಚನಗಳು, (ಸಂ.)ಡಾ.ಎಲ್.ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು, 2000.
6. ವಚನ ಧರ್ಮಸಾರ, ಎಂ.ಆರ್.ಶ್ರೀನಿವಾಸಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2009
7. ವಚನ ವಿಚಾರ, ಓ.ಎಲ್.ನಾಗಭೂಷಣಸ್ವಾಮಿ, ಅಲ್ಲಮ ಪ್ರಕಾಶನ, ಕುವೆಂಪು ನಗರ, ಮೈಸೂರು, 2014.